ಅವಳು ಚೇತರಿಸಿಕೊಳ್ಳುವಂತೆ ಕಂಡುಬರುತ್ತಿದ್ದರೂ ಆಳದಲ್ಲಿಯೇ ಅವಳಿಗಾಗಿದ್ದ ಮಾಯದ ಗಾಯವೊಂದು ಅವಳನ್ನು ನಿರಂತರವಾಗಿ ಕಾಡಿಸುತ್ತಲೇ ಇತ್ತು.

ತಾಯಿಯ ಸೇವೆಯಲ್ಲಿ ತೊಡಗಿದ್ದ ನಯಾಜ್ ಶೇವ್ ಮಾಡಿಕೊಂಡಿರಲಿಲ್ಲ. ಹೀಗಾಗಿ ಸಾಕಷ್ಟು ಗಡ್ಡ ಬೆಳೆದಿತ್ತು. ಎಷ್ಟೋ ದಿನಗಳ ನಂತರ ಎಂಬಂತೆ ಅವಳು ಮಗನನ್ನು ನೋಡಿದಳು. ಅವನ ಗಡ್ಡವನ್ನು ನೋಡಿ ಬೆಚ್ಚಿ ಬಿದ್ದಳು. 'ನಯಾಜ್... ಗಡ್ಡ ಯಾಕೆ ಬಿಟ್ಟಿದೀಯಪ್ಪಾ?' ಎಂದು ಕೇಳಿದಳು. ಅದಕ್ಕವನು ವಿಚಿತ್ರವಾಗಿ ಪ್ರತಿಕ್ರಿಯೆಯನ್ನು ಸೂಚಿಸುತ್ತಾ 'ಹೌದು. ಗಡ್ಡ ಬಿಟ್ಟಿದ್ದೇನೆ. ಒಸಾಮಾ ಬಿನ್ ಲಾಡೆನ್ ಕರ್ದಿದ್ದಾನೆ. ಇನ್ನೂ ಒಂದಡಿ ಉದ್ದ ಬೆಳೆದರೆ ಅಲ್ ಖೈದಾ ಸೇರುತ್ತೇನೆ. ನಾನೀಗ ಟೆರರಿಸ್ಟ್ ಹ್ಹ... ಹ್ಹ... ಹ್ಹ' ಎಂದು ಥೇಟ್ ಬಾಲಿವುಡ್‌ನ ವಿಲನ್‌ನಂತೆ ನಕ್ಕು ಅಭಿನಯಿಸಿದ. ರೆಹಮತ್‌ಳ ರಕ್ತ ಸಂಚಾರ ನಿಂತಂತಾಯಿತು. 'ಸುಳ್ಳು... ಅದು ಯಾವಾಗ ಲಾಡೆನ್ ನಿನ್ನನ್ನು ಕರೆದ... ನೀನಂತೂ ಸುಳ್ಳು ಹೇಳುತ್ತಿದ್ದೀಯಾ. ಎಲ್ಲಿ ಅವನು ಬರೆದ ಲೆಟರ್ ತೋರಿಸು ನೋಡ್ಡೋಣ' ಎಂದು ಸವಾಲನ್ನೆಸೆದಳು. ನಯಾಜ್‌ಗೆ ತೀರಾ ತಮಾಷೆ ಎನಿಸಿತು. ಯಾವುದೋ ಎಳೆ ಮಗುವಿನೊಡನೆ ಮಾತನಾಡುತ್ತಿರುವಂತೆ ಅನಿಸಿ ಅವಳೊಡನೆ ಇನ್ನಷ್ಟು ತಮಾಷೆ ಮಾಡಿ ರಂಜಿಸಬೇಕು ಎನಿಸಿ ತನ್ನ ಅಭಿನಯವನ್ನು ಮುಂದುವರೆಸಿದ.

'ಅಯ್ಯೋ ಲೆಟರ್ ಯಾಕೆ ಬೇಕು? ಈಗಿನ ಕಾಲದಲ್ಲಿ ಲೆಟರ್ ಯಾರು ಬರೀತಾರೆ. ಇ–ಮೇಲ್ ಇದೆಯಲ್ಲಾ... ಅದರಲ್ಲಿ ಕರೆದಿದ್ದಾನೆ. ನಿನ್ನ ಅಳಿಯ ಕಾಗದ ಬರೆದಿದ್ದನೇ... ನೋಡು ಈ ಕಂಪ್ಯೂಟರ್ ಮೂಲಕ ತಾನೇ ಅವನ ಫೋಟೊ, ಪ್ರವರ ಎಲ್ಲಾ ಬಂದದ್ದು. ನನ್ನನ್ನು ಹಾಗೆಯೇ ಕರೆದಿದ್ದಾನೆ' ಎಂದು ತನ್ನ ನಾಟಕವನ್ನು ಮುಂದುವರೆಸಿದ.

ರೆಹಮತ್ ಏನನ್ನೂ ಪಡಿನುಡಿಯಲಿಲ್ಲ. ಅವಳ ಹೃದಯ ಸ್ತಂಭನವಾಗಲಿಲ್ಲ ಅಷ್ಟೇ. ಉಳಿದಂತೆ ಅವಳ ಆಲೋಚನಾ ಶಕ್ತಿಯೇ ಕಡಿದು ಬಿದ್ದಂತಾಯಿತು. ಅವಳು ಮುಂದೇನೂ ಆಲೋಚಿಸಲಾದಳು. ಅಚೇತನಳಾಗಿ ಮಲಗಿದಳೋ, ಮೂರ್ಛೆ ಹೋದಳೋ ಅವಳಿಗೂ ತಿಳಿಯದು, ನಯಾಜ್‌ಗೂ ತಿಳಿಯದು. ಅವನು ತನ್ನ ಡ್ರೈಲಾಗನ್ನು ಒಗೆದು, ಬಹಳ ದಿನಗಳಿಂದ ಕಾಣದೇ ಇದ್ದ ತನ್ನ ಸ್ನೇಹಿತರನ್ನು ಭೇಟಿಯಾಗಲು ಹೊರನಡೆದ. ಮತ್ತೆ ರೆಹಮತ್ ಯಾವಾಗ ಚೇತರಿಸಿಕೊಂಡಳೋ ಅವಳಿಗೇ ತಿಳಿಯದು. ಬಹುಶಃ ಗಂಟೆಗಟ್ಟಲೆ ಕಳೆದಿರಬಹುದು. ನಂತರ ಮರಳಿ ಬಂದ ನಯಾಜ್ ಅವಳನ್ನು ನಿಧಾನಕ್ಕೆ ಎಬ್ಬಿಸಿ ಗಂಜಿಯ ಚಮಚವನ್ನು ಅವಳ ಬಾಯಿಗಿಟ್ಟಾಗ ಅವನ ಮೋರೆಯನ್ನು ಒಮ್ಮೆ ಕೈಯಿಂದ ಮುಟ್ಟಿನೋಡಿ ಅವಳು ನಿಟ್ಟುಸಿರೊಂದು ಹೊರ ಚೆಲ್ಲಿದಳು. ತನ್ನ ಸ್ನೇಹಿತರನ್ನು ಕಾಣಲು ಹೋಗುವ ಮುಂಚೆ ನಯಾಜ್ ಕ್ಲೀನಾಗಿ ಶೇವ್ ಮಾಡಿಕೊಂಡಿದ್ದ.

ಅಂತೂ ರೆಹಮತ್ ಮನೆತುಂಬಾ ಓಡಾಡುವಂತಾದ ಮೇಲೆ ತಂದೆ ಮಗ ಇಬ್ಬರೂ ನೆಮ್ಮದಿಯಿಂದ ಇರತೊಡಗಿದರು. ಅಜ್ರಾ ಕೂಡಾ ತನ್ನ ಗಂಡನೊಡನೆ ಹಾರಿ ಹೋಗಿ ದುಬೈ ಸೇರಿದ್ದಳು. ರೆಹಮತ್‌ಗೆ ಮನೆಯ ಅಲಂಕಾರದ ಗೀಳು ಬಿಟ್ಟುಹೋಗಿತ್ತು. ಎಲ್ಲೆಂದರಲ್ಲಿ ಬಿದ್ದಿರುತ್ತಿದ್ದ ಸಾಮಾನುಗಳು... ತಂದೆ ಮಗ ಸೇರಿ ತಮ್ಮ ಕೈಲಾದಷ್ಟು ಮನೆಯನ್ನು ಓರಣವಾಗಿಡುವ ಪ್ರಯತ್ನವನ್ನು ಮಾಡುತ್ತಿದ್ದರು.

ಆದರೆ, ಅವಳಿಗೆ ಸದಾಕಾಲದ ಆತಂಕ ಕಾಡತೊಡಗಿತು. ಮತ್ತು ಆ ಆತಂಕದ ದೆಸೆಯಿಂದ ಇಲ್ಲಸಲ್ಲದ ಅಪಾಯಗಳನ್ನು ತನ್ನಮನೋಲೋಕದಲ್ಲಿ ಸೃಷ್ಟಿಸಿಕೊಂಡು ತೀವ್ರ ರೀತಿಯ ಖಿನ್ನತೆಗೆ